# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 212 | Pages. 2 | Date: 01-08-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 212 – ಪುಟಗಳು : 2 | 01-08-2026 ಶನಿವಾರ | Ph: 8762954248 | ದರ : ₹1


# ಸ್ಥಿತಿಗತಿ ಅರಿತು ನೀರು ಬಿಡುವ ನಿರ್ಧಾರ ಕೈಗೊಳ್ಳಿ

## ರಾಜ್ಯ ಸರ್ಕಾರಕ್ಕೆ ಹೆಚ್.ಡಿ.ಕೆ. ಕಿವಿಮಾತು I ರೈತರ ಹೋರಾಟಕ್ಕೆ ಬೆಂಬಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನೀರಿನ ಸ್ಥಿತಿಗತಿಯನ್ನು ಅವಲೋಕಿಸಿ ನಂತರ ನೀರು ಬಿಡುವ ತೀರ್ಪು ನೀಡಬೇಕೆಂದು ಸಿಡಬ್ಲ್ಯೂಆರ್‌ಸಿ ಮತ್ತು ಸಿಡಬ್ಲ್ಯೂಎಂಎ ಮುಖ್ಯಸ್ಥರು, ಸದಸ್ಯರ ಮೇಲೆ ಒತ್ತಡ ಹಾಕುವ ಕೆಲಸ ರಾಜ್ಯ ಸರ್ಕಾರದಿಂದ ಆಗಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ರಾಜ್ಯದ ಹೆಚ್ಚು ಭಾಗಗಳಲ್ಲಿ ಬರ ಪರಿಸ್ಥಿತಿಯಿಂದ ಸುಮಾರು 150 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ರೈತರ ಬೆಳೆ ಸಂಪೂರ್ಣ ನಾಶವಾಗಿದೆ. ಮಣ್ಣ ಮಕ್ಕಳ ಆತ್ಮಹತ್ಯೆ ಸರಣಿ ಮತ್ತೆ ಶುರುವಾಗಿದೆ ಎಂದು ಆತಂಕ ಹೊರ ಹಾಕಿದರು.

ಕಾವೇರಿ ಕೊಳ್ಳದ ಜಲಾಶಯಗಳಲ್ಲಿ 54/55 ಟಿಎಂಸಿ ನೀರಿರಬಹುದು. ಮುಂದೆಯೂ ಮಳೆ ಕೊರತೆ ಕಾಡಿದರೆ ಕುಡಿಯುವ ನೀರಿಗೂ ಸಮಸ್ಯೆ ಎದುರಾಗಲಿದೆ. ಹೀಗಿದ್ದರೂ ಸಿಡಬ್ಲ್ಯೂಆರ್‌ಸಿ ಮತ್ತು ಸಿಡಬ್ಲ್ಯೂಎಂಎ ಸಮಿತಿ ತಮಿಳುನಾಡಿಗೆ ನೀರು ಬಿಡುವಂತೆ ಆದೇಶ ಮಾಡಿದ್ದಾರೆ. ಈ ಆದೇಶದ ವಿರುದ್ಧ ಈಗಾಗಲೇ ಪ್ರತಿಭಟನೆ ಶುರುವಾಗಿದ್ದು, ಇದು ಅನಿವಾರ್ಯ, ಇದಕ್ಕೆ ತಮ್ಮ ಬೆಂಬಲ ಇದೆ ಎಂದರು.

ಸಂಕಷ್ಟದ ನಡುವೆಯೂ ನೀರು ಬಿಡುಗಡೆ ಆದೇಶ ಹೊರ ಬಿದ್ದಿದ್ದರೂ ರಾಜ್ಯ ಸರ್ಕಾರ ಮತ್ತು ನಾಡಿನ ಜನರು ಮೌನವಹಿಸಿದರೆ ಅದು ದೌರ್ಬಲ್ಯ ಆಗಲಿದೆ. ಹಿಂದೆಯೂ ಸುಪ್ರೀಂ ಕೋರ್ಟ್ ತೀರ್ಪು ಆಧರಿಸಿ ನೀರು ಬಿಡಲಾಗಿದೆ. ಆದರೆ ಇದನ್ನೇ ಸ್ವಾರ್ಥಕ್ಕೆ ಯಾರೇ ಬಳಸಿಕೊಂಡರೂ ತಪ್ಪು ಎಂದರು.

ಎರಡೂ(ಸಿಡಬ್ಲ್ಯೂಆರ್‌ಸಿ ಮತ್ತು ಸಿಡಬ್ಲ್ಯೂಎಂಎ) ಸಮಿತಿಯವರು ಎಸಿ ಕೋಣೆಯೊಳಗೆ ಕುಳಿತು ನೀರು ಬಿಡಿ ಎನ್ನುವುದು ಸರಿಯಲ್ಲ. ಕರ್ನಾಟಕದಲ್ಲಿ ಮಳೆ ಹೇಗಿದೆ, ನೀರಿನ ಸ್ಥಿತಿಗತಿ ಎಷ್ಟಿದೆ, ಹಾಗೆಯೇ ತಮಿಳುನಾಡಿನಲ್ಲಿ ಎಷ್ಟಿದೆ, ಅವರು ಕೃಷಿಗೆ ಅಥವಾ ಕುಡಿಯಲು ನೀರು ಕೇಳುತ್ತಿದ್ದಾರೆಯೇ ಎಂಬ ಬಗ್ಗೆ ಎರಡೂ ಕಡೆ ಖುದ್ದಾಗಿ ವೀಕ್ಷಣೆ ಮಾಡಿ ನಂತರ ತೀರ್ಪು ನೀಡಬೇಕು ಎಂದು ಒತ್ತಾಯಿಸಿದ ಕುಮಾರಸ್ವಾಮಿ, ತಮಿಳುನಾಡಿನವರು ಯಾವ ಉದ್ದೇಶಕ್ಕೆ ನೀರು ಕೇಳುತ್ತಿದ್ದಾರೆ ಎಂಬುದನ್ನು ಮನವರಿಕೆ ಮಾಡಬೇಕೆಂದರು. ನೀವೇ ಒಂದು ನಿಯೋಗ ಬಂದು ಸ್ಥಿತಿಗತಿ ಪರಿಶೀಲಿಸಿ ಎಂದು ಆಗ್ರಹಿಸಿ ಎಂದರು.

ರಾಜ್ಯ ಸರ್ಕಾರವೂ ಈ ಬೇಡಿಕೆ ಮುಂದಿಟ್ಟು ಒತ್ತಡ ಹೇರಬೇಕು. ಮುಂದಿನ ದಿನಗಳಲ್ಲಿ 12 ಟಿಎಂಸಿ ನೀರು ಹರಿದು ಬರಬಹುದು ಎಂದು ಅಂದಾಜಿಸಿ ಆದೇಶ ಮಾಡುವುದು ತರವಲ್ಲ, ಅವರು ಇಲ್ಲಿಗೆ ಬಂದು ನೋಡಬೇಕು. ನಮ್ಮ ರೈತರ ಹಿತ ಬಲಿಕೊಟ್ಟು, ಹಾಳುಮಾಡಿ, ತಮಿಳುನಾಡು ಸಹ ನೀರು ಕೇಳುವುದು ಸರಿಯಲ್ಲ ಎಂದರು. ಮೇಕೆದಾಟು ಅಣೆಕಟ್ಟು ನಿರ್ಮಾಣ ಸಂಬಂಧ ಕಳಿಸಿದ್ದ ಡಿಪಿಆರ್ ವಾಪಸ್ ಕಳಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಇದಕ್ಕಾಗಿ ನಾನು ಮತ್ತು ದೇವೇಗೌಡರು ಹಲವು ಬಾರಿ ಸಂಬಂಧಪಟ್ಟ ಸಚಿವರಿಗೆ ಪತ್ರ ಬರೆದಿದ್ದೇವೆ.

ಆರಂಭದಲ್ಲಿ ಉದ್ದೇಶಿತ ಅಣೆಕಟ್ಟೆಯಲ್ಲಿ 67 ಟಿಎಂಸಿ ನೀರು ಸಂಗ್ರಹ ಮಾಡುವ ಉದ್ದೇಶ ಇತ್ತು. ಆದರೆ ಕೇಂದ್ರದವರು 30 ಟಿಎಂಸಿ ಶೇಖರಣೆಗೆ ಅವಕಾಶ ಕೊಟ್ಟಿದ್ದಾರೆ. ಇದರಲ್ಲಿ 27 ಟಿಎಂಸಿ ಬಳಸಬಹುದು. ಇದಕ್ಕೆ ಒಪ್ಪಿಗೆಯೂ ಸಿಕ್ಕಿತ್ತು. ಆದರೆ ಹೊಸ ಡಿಪಿಆರ್ ವಾಪಸ್ ಕಳಿಸಲಾಗಿದ್ದು, ಈ ಬಗ್ಗೆಯೂ ಭಾನುವಾರದ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದರು.

ಸಿಎಂ ಅವರು ಹಿಂದೆ ನಮ್ಮ ಹಕ್ಕು, ನಮ್ಮ ನೀರು ಎಂದು ಪಾದಯಾತ್ರೆ ಮಾಡಿದ್ದರು, ಬಾಯಲ್ಲಿ ಹೇಳಿದ್ರೆ ಆಗಲ್ಲ, ಕುಮಾರಸ್ವಾಮಿ ಅನುಮತಿ ಕೊಡಿಸಲಿ ಎಂದೂ ಆಗಲ್ಲ, ಮೊದಲು ಮೊದಲ ಹಂತದ ಕಾಮಗಾರಿಯನ್ನು ತಾಂತ್ರಿಕವಾಗಿ ಕಾರ್ಯರೂಪಕ್ಕೆ ತರಬೇಕೆಂದರು.



### ಸರ್ವಪಕ್ಷ ಸಭೆಗೆ ಹಾಜರಾಗುವೆ

ಕಾವೇರಿ ನೀರು ಹಂಚಿಕೆ ಬಿಕ್ಕಟ್ಟು ಸಂಬಂಧ ಚರ್ಚಿಸಿ ಮುಂದಿನ ಹೆಜ್ಜೆ ಇಡಲು ಇದೇ ಭಾನುವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆದಿರುವ ಸರ್ವ ಪಕ್ಷ ಸಭೆಗೆ ತಾವು ಭಾಗಿಯಾಗುತ್ತೇನೆ. ರೈತರ ಬದುಕಿಗಾಗಿ ನಾವೆಲ್ಲರೂ ರಾಜಕೀಯ ಬದಿಗಿಟ್ಟು ಒಗ್ಗಟ್ಟು ಪ್ರದರ್ಶಿಸಬೇಕಿದೆ ಎಂದು ಕುಮಾರಸ್ವಾಮಿ ಹೇಳಿದರು.

### ವಸ್ತುಸ್ಥಿತಿಯ ಮನವರಿಕೆ ಮಾಡಿಕೊಡಿ

ತಮಿಳುನಾಡು ಸಿಎಂ ರಾಜ್ಯಕ್ಕೆ ಬರಲಿ, ಈ ವೇಳೆ ರಾಜ್ಯದ ನೀರಿನ ಸ್ಥಿತಿಗತಿ, ಮೇಕೆದಾಟು ಯೋಜನೆ ಲಾಭ-ನಷ್ಟದ ಬಗ್ಗೆ ಮನವರಿಕೆ ಮಾಡಿಕೊಡಲಿ, ನೀರು ಹಂಚಿಕೆ ವ್ಯಾಜ್ಯ ಇನ್ನೂ ಎಷ್ಟು ದಿನ ಉಳಿಯಬೇಕು ಎಂಬುದನ್ನು ಅರಿಕೆ ಮಾಡಿ, ಅಲ್ಲಿರುವವರು ರೈತರು,ನಮ್ಮವರು ಅಲ್ವಾ ಎಂದು ಕೇಳಿದರು.

ಬಿಕ್ಕಟ್ಟು ಶಮನವಾದ್ರೆ ಒಳಿತು, ಆದರೆ ರಾಜಕೀಯ ದುರುಪಯೋಗ ಆಗಬಾರದು ಎಂದರು. ನಾವು ನೀರು ಬಿಡದಿದ್ದರೆ ತಮಿಳುನಾಡು ಸುಪ್ರೀಂ ಮೊರೆ ಹೋಗಬಹುದು. ವಾಸ್ತವಾಂಶ ಹೇಳಲು ನಾವು ತಯಾರಿರಬೇಕು ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

### ಬರಗಾಲದ ಬಗ್ಗೆ ಚಿಂತೆ ಇಲ್ಲ

ಮಂತ್ರಿ ಮಂಡಲ ರಚನೆಗಾಗಿ ಕಳೆದ 4 ದಿನದಿಂದ ಎಲ್ಲರೂ ಹೈಕಮಾಂಡ್ ಮನೆ ಬಾಗಿಲು ಕಾದು ನಿಂತಿದ್ದಾರೆ. ಬರಗಾಲದ ಬಗ್ಗೆ ಇವರಿಗೆ ಚಿಂತೆ ಇಲ್ಲ. ಏನು ಕೊಡುಗೆ ಘೋಷಣೆ ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ವಿಪರ್ಯಾಸ ಎಂದರೆ ಮೃತಪಟ್ಟಿರುವ ಹಸು,ಕುರಿ ಮಾಲೀಕರಿಗೆ ಹಣ ನೀಡಿಲ್ಲ ಎಂದು ದೂರಿದ ಎಚ್ಡಿಕೆ, ಗ್ಯಾರಂಟಿ ಯೋಜನೆ ಪರಿಷ್ಕರಿಸಿ, ನಿಗದಿತ ಅನುದಾನವನ್ನು ಸೂಕ್ತವಾಗಿ ಬಳಸಿ. ರೈತರಿಗೆ ಆತ್ಮಸ್ಥೈರ್ಯ ತುಂಬಿ, ದೆಹಲಿಯಲ್ಲಿ ಕೂತರೆ ಆಗುತ್ತಾ ಎಂದು ಪ್ರಶ್ನಿಸಿದರು. ಸಂಪುಟ ವಿಸ್ತರಣೆ ಆದರೂ ಮಂತ್ರಿಗಳಿಂದ ಸಮಗ್ರ ಕೆಲಸ ಆಗಲಿದೆ ಎಂಬ ನಂಬಿಕೆ ನನಗಿಲ್ಲ. ಸರ್ಕಾರ ಕೂಡಲೇ ರೈತರ ನೆರವಿಗೆ ಧಾವಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಹೆಚ್.ಪಿ.ಸ್ವರೂಪ್, ಸಿ.ಎನ್.ಬಾಲಕೃಷ್ಣ, ಸುರೇಶ್ ಬಾಬು, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ, ಮುಖಂಡ ಬಿದಿರೆಕೆರೆ ಜಯರಾಂ ಇದ್ದರು.

# ಕಾಡಾನೆ ದಾಳಿಗೆ ರೈತ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ ಹಿರೇಹಸಡೆ ಗ್ರಾಮದಲ್ಲಿ ಕಾಡಾನೆ ದಾಳಿಗೆ ರೈತ ಬಲಿಯಾಗಿದ್ದಾರೆ.

ಕಣಗುಪ್ಪೆ ಗ್ರಾಮದ ಧರ್ಮರಾಜು (50) ಮೃತರು. ಕಳೆದ ಬುಧವಾರ ಬೇಲೂರಿಗೆ ತೆರಳಿದ್ದ ಅವರು ವಾಪಾಸ್ ಬಂದಿರಲಿಲ್ಲ. ಅರೇಹಳ್ಳಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಲಾಗಿತ್ತು. ಧರ್ಮರಾಜು ಅವರಿಗಾಗಿ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ನಿರಂತರ ಹುಡುಕಾಟ ನಡೆಸುತ್ತಿದ್ದರು. ಇದೇ ವೇಳೆ ಬುಧವಾರ ರಾತ್ರಿ ಚಿಕ್ಕಹಸಡೆ ಸಮೀಪ ಧರ್ಮರಾಜು ಅವರು ನಡೆದುಕೊಂಡು ಹೋಗುತ್ತಿದ್ದುದನ್ನು ಸ್ಥಳೀಯ ಯುವಕನೊಬ್ಬ ಗಮನಿಸಿದ್ದ ಎನ್ನಲಾಗಿದೆ. ಈ ಮಾಹಿತಿಯ



ಆಧಾರದ ಮೇಲೆ ಚಿಕ್ಕಹಸಡೆ ಹಾಗೂ ಹಿರೇಹಸಡೆ ಗ್ರಾಮಗಳ ನಡುವಿನ ಕಾಫಿ ತೋಟಗಳಲ್ಲಿ ಕುಟುಂಬಸ್ಥರು ಮತ್ತು ಗ್ರಾಮಸ್ಥರು ಹುಡುಕಾಟ ತೀವ್ರಗೊಳಿಸಿದ್ದರು.

ಹುಡುಕಾಟ ಮುಂದುವರಿದ ಸಂದರ್ಭದಲ್ಲಿ ಶುಕ್ರವಾರ ಸಂಜೆ 4.30ರ ವೇಳೆಗೆ ಹಿರೇಹಸಡೆ ಗ್ರಾಮದ ಸುದರ್ಶನ್ ಎಂಬುವವರಿಗೆ ಸೇರಿದ ಕಾಫಿ ತೋಟದಲ್ಲಿ ಧರ್ಮರಾಜು ಅವರ ಶವ ಪತ್ತೆಯಾಗಿದೆ. ಕಾಡಾನೆ ದಾಳಿಯಿಂದ ಗಂಭೀರವಾಗಿ ಗಾಯಗೊಂಡ ಅವರು ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಘಟನೆಯಿಂದ ಹಿರೇಹಸಡೆ ಹಾಗು ಸುತ್ತಲಿನ ಗ್ರಾಮಗಳಲ್ಲಿ ಆತಂಕ ಮತ್ತು ದುಃಖದ ವಾತಾವರಣ ನಿರ್ಮಾಣವಾಗಿದೆ.

ಶವ ಪತ್ತೆಯಾದ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದರು. ಈ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚುತ್ತಿದ್ದು, ರೈತರು ಜೀವಭಯದಲ್ಲಿ ಕೃಷಿ ಚಟುವಟಿಕೆ ನಡೆಸುವಂತಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಅರೇಹಳ್ಳಿ ಪಿಎಸ್‌ಐ ಶೋಭ ಭರಮಣ್ಣನವರ್, ಅರಣ್ಯಾಧಿಕಾರಿ ಯತೀಶ್, ಕಾಫಿ ಬೆಳೆಗಾರರ ಸಂಘದ ಶಾರೀಬ್, ಗ್ರಾಮಸ್ಥರಾದ ಮಂಜು ಕಿತ್ತಾವರ, ನಂದೀಶ್, ಕೆ.ಜಿ.ಕುಮಾರ್, ರೈತ ಸಂಘದ ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು.

# ಹಾಸನದಲ್ಲಿ ಎಬಿವಿಪಿ ಪ್ರತಿಭಟನಾ ಮೆರವಣಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ಹುದ್ದೆ ಭರ್ತಿ ಮಾಡಬೇಕು ಎಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಸರ್ಕಾರಿ ಕಲಾ ಕಾಲೇಜಿನಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಎಬಿವಿಪಿ ಜಿಲ್ಲಾ ಸಂಚಾಲಕ ವರಣ್ ಪುರಾಣಿಕ್ ಮಾತನಾಡಿ, ರಾಜ್ಯದಲ್ಲಿ 430ಕ್ಕೂ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿವೆ. ಅತಿಥಿ ಉಪನ್ಯಾಸಕರ ನೇಮಕಾತಿ ವಿಳಂಬ ಹಾಗೂ ಖಾಯಂ ಬೋಧಕರ ಕೊರತೆಯಿಂದ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಆರೋಪಿಸಿದರು.

ಜೂನ್ - ಜುಲೈನಲ್ಲಿ ಕಾಲೇಜುಗಳು ಆರಂಭವಾದರೂ ಬಿಎ, ಬಿಕಾಂ, ಬಿಬಿಎ, ಬಿಸಿಎ ಸೇರಿ ವಿವಿಧ ಕೋರ್ಸ್‌ಗಳ ಪ್ರಮುಖ ವಿಷಯಗಳಿಗೆ ಬೋಧಕರೇ ಇಲ್ಲ. ಅದರಿಂದ ವಿದ್ಯಾರ್ಥಿಗಳು ತರಗತಿಗಳಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರಿ ಕಾಲೇಜುಗಳ ಫಲಿತಾಂಶವೂ ಕುಸಿಯುತ್ತಿದೆ ಎಂದರು.

ಸಾವಿರಾರು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇದ್ದರೂ ಕಳೆದ ಎರಡು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಪ್ರತಿವರ್ಷ ಅತಿಥಿ ಉಪನ್ಯಾಸಕರ ನೇಮಕಾತಿಯೂ ಶೈಕ್ಷಣಿಕ ವರ್ಷ ಆರಂಭವಾದ ಹಲವು ತಿಂಗಳ ಬಳಿಕ ನಡೆಯುತ್ತಿರುವುದು ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ಯಾಯ ಎಸಗಲಾಗುತ್ತಿದೆ ಎಂದು ಆರೋಪಿಸಿದರು.

ಗ್ರಾಮೀಣ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಖಾಸಗಿ ಕಾಲೇಜು ಅಥವಾ ಟ್ಯೂಷನ್‌ಗೆ ಹೋಗಲು ಆರ್ಥಿಕ ಸಾಮರ್ಥ್ಯ ಇರುವುದಿಲ್ಲ. ಸರ್ಕಾರದ ನಿರ್ಲಕ್ಷ್ಯದಿಂದ ಬಡವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆಂದರು.

ಆ. 10ರ ಒಳಗೆ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಪಾರದರ್ಶಕವಾಗಿ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಬೇಕು. ಸೇವಾ ಭದ್ರತೆ, ಇಎಸ್‌ಐ, ಪಿಎಫ್ ಸೇರಿ ಎಲ್ಲಾ ಸೌಲಭ್ಯ ಕಲ್ಪಿಸಿ ಗೌರವಧನ ಹೆಚ್ಚಿಸಬೇಕು. ಆರು ತಿಂಗಳೊಳಗೆ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಕೆಪಿಎಸ್‌ಸಿ/ಸಂಬಂಧಿತ ಪ್ರಾಧಿಕಾರದ ಮೂಲಕ ಭರ್ತಿ ಮಾಡಬೇಕು. ದೂರದ ಊರುಗಳಿಂದ ಬರುವ ಬಡ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಪವನ್, ಜೀವನ್, ಆದಿತ್ಯ, ಮಮತಾ ಚೌದ್ರಿ, ಸ್ಮಿತಾ ಸೇರಿ ಇತರರಿದ್ದರು.




# ಇಂದು ಪತ್ರಕರ್ತರ ಸಂಘದಿಂದ ಸ್ಟಡಿ ವಿಥ್ ಸೊಸೈಟಿ ಕಾರ್ಯಕ್ರಮ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿ ವತಿಯಿಂದ ಆ. 1ರ ಶನಿವಾರ ಬೆಳಿಗ್ಗೆ 10.30ಕ್ಕೆ ಪ್ರಕಾಶಕಿ ಹಾಗೂ ಪತ್ರಕರ್ತೆ ಭಾವನಾ ಬೆಳಗೆರೆ ಅವರೊಂದಿಗೆ ತಿಂಗಳ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿ ಸಂಚಾಲಕ ಪ್ರಸನ್ನಕುಮಾರ್ ಹಾಡ್ಲಹಳ್ಳಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸಾಂಸ್ಕೃತಿಕ ಸಮಿತಿಯ ಸ್ಟಡಿ ವಿಥ್ ಸೊಸೈಟಿ ಹೆಸರಿನಡಿ ನಡೆಸುತ್ತಿರುವ ಏಳನೇ ಕಾರ್ಯಕ್ರಮ ಇದಾಗಿದೆ. ಪತ್ರಿಕೋದ್ಯಮದಲ್ಲಿ ಮಾಲೀಕತ್ವ ಹಾಗೂ ಪತ್ರಕರ್ತರ ಜವಾಬ್ದಾರಿ ಕುರಿತು ಭಾವನಾ ಬೆಳಗೆರೆ ಮಾತನಾಡಲಿದ್ದಾರೆ. ತಮ್ಮ ತಂದೆ ರವಿ ಬೆಳಗೆರೆ ಅವರ ಪತ್ರಿಕೋದ್ಯಮ ಜೀವನ ಕುರಿತು ಮಾತನಾಡುವರು. ಪತ್ರಕರ್ತರು ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮ ಉಪಯುಕ್ತವಾಗಲಿದೆ ಎಂದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಲಿದ್ದು, ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಉಪಸ್ಥಿತಿ ವಹಿಸಲಿದ್ದಾರೆ. ಸಂಘದ ಎಲ್ಲಾ ಪದಾಧಿಕಾರಿಗಳು, ಪತ್ರಕರ್ತರು, ಸಂಪಾದಕರು, ಉಪ ಸಂಪಾದಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಸಾಂಸ್ಕೃತಿಕ ಸಮಿತಿ ವತಿಯಿಂದ ನಡೆಸಿರುವ ಆರು ಕಾರ್ಯಕ್ರಮಗಳು ಯಶಸ್ವಿಯಾಗಿವೆ. ರಾಜ್ಯದಲ್ಲೇ ಮೊದಲ ಬಾರಿಗೆ ಹಾಸನ ಪತ್ರಕರ್ತರ ಸಂಘ ನೂತನ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ನೋಟೆಡ್ ನ್ಯೂಸ್ ಎಂಬ ಪರಿಕಲ್ಪನೆಯಡಿ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಶೇಷ ವರದಿಗಳನ್ನು ಬಿತ್ತರಿಸುವ ಮೂಲಕ ಹೊಸ ಸಂಪ್ರದಾಯಕ್ಕೆ ಮುನ್ನುಡಿ ಬರೆಯಲಾಗಿದೆ ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಹರೀಶ್, ಸಾಂಸ್ಕೃತಿಕ ಸಮಿತಿ ಪದಾಧಿಕಾರಿಗಳಾದ ಸಿ.ಆರ್.ನವೀನ್, ಪ್ರಕಾಶ್, ಮಲ್ಲಿಕಾರ್ಜುನ ಕೊಚ್ಚರಗಿ, ಮೋಹನ್ ಕಣತೂರು ಇದ್ದರು.

# ಮತಗಟ್ಟೆ ಅಧಿಕಾರಿಗಳ ಸಭೆಗೆ ಏಜೆಂಟರು ಹಾಜರಾಗಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಶೇ.100 ರಷ್ಟು ಪೂರ್ಣಗೊಂಡಿರುವ ಮತಗಟ್ಟೆ ಅಧಿಕಾರಿಗಳು ಸಭೆ ನಡೆಸಿ ಮತಗಟ್ಟೆ ಏಜೆಂಟ್‌ರಿಂದ ಸಹಿ ಪಡೆದು ಆ್ಯಪ್‌ನಲ್ಲಿ ಅಪ್ಲೋಡ್ ಮಾಡಬೇಕು. ಈ ನಿಟ್ಟಿನಲ್ಲಿ ಸಭೆಗೆ ಖುದ್ದು ಹಾಜರಾಗುವಂತೆ ಮತಗಟ್ಟೆ ಏಜೆಂಟರಿಗೆ ನಿರ್ದೇಶನ ನೀಡುವಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದ ಪ್ರಗತಿಯ ಮಾಹಿತಿ ನೀಡುವ ಕುರಿತು ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಇದುವರೆಗೆ ಶೇ.99 ರಷ್ಟು ಎನ್ಯೂಮರೇಷನ್ ನಮೂನೆಗಳನ್ನು ಹಿಂದಿರುಗಿಸಲಾಗಿದೆ.

ಉಳಿದ ಶೇ.1 ರಷ್ಟು ಅಂದರೆ 16000 ಎನ್ಯೂಮರೇಷನ್ ನಮೂನೆಗಳನ್ನು ಹಿಂದಿರುಗಿಸುವಂತೆ ತಿಳಿಸುವುದರ ಮೂಲಕ ಆರೋಗ್ಯಕರ ಮತದಾರರ ಪಟ್ಟಿ ತಯಾರಿಸಲು ಸಹಕಾರ ನೀಡುವಂತೆ ತಿಳಿಸಿದರು.

ಕರಡು ಮತದಾರರ ಪಟ್ಟಿ ಆ.17 ರಂದು ಪ್ರಕಟಿಸಲಾಗುತ್ತದೆ. ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಆ.17 ರಿಂದ ಸೆ.16 ರವರೆಗೆ ಅವಕಾಶ ಇದೆ.

ಅ. 19 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟ ಆಗುತ್ತದೆ. ಆಕಸ್ಮಾತ್ತಾಗಿ ಅರ್ಹ ಮತದಾರರ ಹೆಸರು ಪಟ್ಟಿಯಲ್ಲಿ ಕೈ ತಪ್ಪಿಹೋಗಿದ್ದರೆ ಭಯಪಡುವ ಅಗತ್ಯವಿಲ್ಲ. ಹೊಸದಾಗಿ ನಮೂನೆ 6 ರ ಜೊತೆಗೆ 11 ದಾಖಲೆಗಳಲ್ಲಿ ಯಾವುದಾದರೊಂದು ದಾಖಲೆ ಲಗತ್ತಿಸಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಉಪ ವಿಭಾಗಾಧಿಕಾರಿಗಳಾದ ಜಗದೀಶ್ ಗಂಗಣ್ಣನವರ್, ಹುಲ್ಲುಮನಿ ತಿಮ್ಮಣ್ಣ ಮತ್ತು ವಿವಿಧ ಅಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.



# ಗುರುಗಳನ್ನು ಸ್ಮರಿಸುತ್ತೇವೆ ಹೊರತು ಬಿಲೇನಿಯರ್‌ಗಳನ್ನಲ್ಲ

## ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ । ಗುರು ವಂದನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾಕಷ್ಟು ಸುಖ ಸಂಪತ್ತು ಇದ್ದರೂ ಎಲ್ಲವನ್ನೂ ತ್ಯಜಿಸಿ ತಮ್ಮಲ್ಲಿರುವ ಜ್ಞಾನವನ್ನು ಇತರರಿಗೆ ಹಂಚಿದ ಬುದ್ಧ, ವೇದ ವ್ಯಾಸರನ್ನು ನಾವು ಸಾವಿರಾರು ವರ್ಷಗಳಿಂದ ಸ್ಮರಿಸುತ್ತಿದ್ದೇವೆ ಹೊರತು ಬಿಲೇನಿಯರ್‌ಗಳನ್ನಲ್ಲ. ಗುರುವಿಗೆ ಅಂತಹ ಮಹತ್ವದ ಸ್ಥಾನಮಾನವಿದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಆದಿಚುಂಚನಗಿರಿ ಶಾಖಾ ಮಠದಲ್ಲಿ ಗುರುವಾರ ಸಂಜೆ ನಡೆದ ಗುರು ಪೌರ್ಣಿಮೆ ಹಾಗೂ ಗುರು ತೋರಿದ ದಾರಿ ತಿಂಗಳ ಮಾಮನ ತೇರು 143ನೇ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬುದ್ದನ ಜೀವನದ ಮೂರು ಪ್ರಮುಖ ಘಟ್ಟಗಳಾದ ಜನನ, ಜ್ಞಾನೋದಯ ಹಾಗೂ ಮಹಾಪರಿನಿರ್ವಾಣ ಮೂರೂ ಪೂರ್ಣಿಮೆಯಂದೇ ಸಂಭವಿಸಿದ್ದು ವಿಶೇಷ. ಆತ್ಮಜ್ಞಾನ ಲಭಿಸಿದ ನಂತರವೂ ಜ್ಞಾನಿಗಳು ತಮ್ಮ ಶರೀರವನ್ನು ಕಾಯ್ದುಕೊಳ್ಳುವುದು ಸ್ವಂತಕ್ಕಲ್ಲ, ಸಮಾಜಕ್ಕೆ ಜ್ಞಾನವನ್ನು ಪಸರಿಸಲು ಅವರು ಶರೀರ ಕಾಪಾಡಿಕೊಂಡರು. ಶರೀರವು ಧರ್ಮ ಸಾಧನೆಗೆ ವಾಹನವಿದ್ದಂತೆ ಎಂದು ಮನುಷ್ಯ ಜೀವನದ ಉದ್ದೇಶವನ್ನು ವಿವರಿಸಿದರು.

ಗೌತಮ ಬುದ್ದ ತನಗೆ ಜ್ಞಾನೋದಯವಾದ ಬಳಿಕ ಅದನ್ನು ಸುಮ್ಮನೆ ಯಾರ ಬಳಿಯೋ ಹೇಳಿ ಮುಗಿಸಲಿಲ್ಲ. ಆ ಜ್ಞಾನಕ್ಕಾಗಿ ಆತ ತನ್ನ ರಾಜ ವೈಭವ, ಸುಂದರ ಹೆಂಡತಿ ಹಾಗೂ ಮಗುವನ್ನೇ ಬಿಟ್ಟು ಬಿಹಾರದ ಬೋಧಗಯಾದಿಂದ ಕಾಶಿಯ ಸಾರನಾಥಕ್ಕೆ ಎರಡು ತಿಂಗಳು ಕಾಲ್ನಡಿಗೆಯಲ್ಲೇ ಸಾಗಿದರಿ. ಅಲ್ಲಿ ತಪಸ್ಸಿನಲ್ಲಿದ್ದ ಐವರು ಸಾಧಕರಿಗೆ ಧರ್ಮೋಪದೇಶ ನೀಡುವ ಮೂಲಕ ಧರ್ಮಚಕ್ರ ಪ್ರವರ್ತನ ಮಾಡಿದರು.



ಆ ಪವಿತ್ರ ದಿನವೂ ಇದೇ ಗುರುಪೂರ್ಣಿಮೆಯಾಗಿತ್ತು ಎಂದು ಶ್ರೀಗಳು ವಿವರಿಸಿದರು.

ಜ್ಞಾನ ಪರಂಪರೆಯನ್ನು ಅತ್ಯಂತ ವ್ಯವಸ್ಥಿತವಾಗಿ ಮುಂದಿನ ಪೀಳಿಗೆಗೆ ತಲುಪಿಸಿದ ಶ್ರೇಷ್ಟ ಕೆಲಸವನ್ನು ವೇದವ್ಯಾಸ ಮಹರ್ಷಿ ಮಾಡಿದ್ದಾರೆ. ತಾಯಿಯಾದವಳು ಮಗುವಿಗೆ ಜೀರ್ಣವಾಗುವಂತೆ ಆಹಾರ ನೀಡುವ ಹಾಗೆ ಮಹರ್ಷಿಗಳು ಜ್ಞಾನವನ್ನು ನಾಲ್ಕು ವೇದಗಳು (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ) ಹಾಗೂ 18 ಪುರಾಣಗಳಾಗಿ ವಿಂಗಡಿಸಿದರು. ಮುಂದುವರಿದು ವ್ಯಾಸರ ಶ್ಲೋಕ ಉಲ್ಲೇಖಿಸಿದ ಶ್ರೀಗಳು, ಪರೋಪಕಾರಾಯ ಪುಣ್ಯಾಯ, ಪಾಪಾಯ ಪರಪೀಡನಂ ಅಂದರೆ ಅನ್ಯರಿಗೆ ಸಹಾಯ ಮಾಡುವುದೇ ಪುಣ್ಯ, ಇತರರಿಗೆ ಪೀಡನೆ ಅಥವಾ ತೊಂದರೆ ಕೊಡುವುದೇ ಪಾಪ ಎಂಬ ಸರಳ ಸತ್ಯವನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ರಂದರು.

ಆದಿಚುಂಚನಗಿರಿ ಮಠದ ಪರಂಪರೆ ಹಾಗೂ 71ನೇ ಜಗದ್ಗುರುಗಳ ಸೇವೆಯನ್ನು ಸ್ಮರಿಸಿದ ಶ್ರೀಗಳು, ಕೇವಲ ಭೌತಿಕ ಸಂಘಟನೆ ಅಥವಾ ಶಾಲಾ-ಕಾಲೇಜುಗಳ ಮೂಲಕ ಸಿಗುವ ಭೌತಿಕ ಪ್ರಬುದ್ಧತೆ ಮಾತ್ರ ಸಾಲದು. ವ್ಯಕ್ತಿಗೆ ಆಧ್ಯಾತ್ಮಿಕ ವಿಕಾಸ ಮತ್ತು ಅರಿವು ಮೂಡದ ಹೊರತು ಆತ ಅಜ್ಞಾನದ ಗುಲಾಮನಾಗಿಯೇ ಉಳಿಯುತ್ತಾನೆ. ಭೌತಿಕ, ಬೌದ್ಧಿಕ ಹಾಗು ಆಧ್ಯಾತ್ಮಿಕ ಈ ಮೂರೂ ರಂಗಗಳಲ್ಲಿ ಸೇವೆ ಸಲ್ಲಿಸುವುದು ಶ್ರೇಷ್ಟ ಕಾರ್ಯ ಎಂದು ನುಡಿದರು.

ಜೀವನದಲ್ಲಿ ಸಾಕಷ್ಟು ಇಬ್ಬಂದಿಯ ಸ್ಥಿತಿ ನಿರ್ಮಾಣವಾಗುತ್ತದೆ. ಎಲ್ಲವನ್ನೂ ನಾನೇ ಮಾಡುತ್ತೇನೆಂದು ಹೊರಟರೆ ನಮ್ಮ ಜೀವನ ತಂತಿ ಮೇಲಿನ ನಡಿಗೆಯಾಗುತ್ತದೆ. ಗುರುವಿನ ಕಾರುಣ್ಯವಿಲ್ಲದೆ ಸಾಧನೆ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕುವೆಂಪು ಅವರ ಜ್ಞಾನವನ್ನು ನಾವೆಲ್ಲರೂ ಅರಿಯಬೇಕು. ಕುವೆಂಪು ಸುಮ್ಮನೆ ರಾಷ್ಟ್ರಕವಿ, ಮಹಾನ್ ದಾರ್ಶನಿಕ ಆಗಿಲ್ಲವೆಂದು ಅವರ ಕವಿತೆಗಳ ವಾಚನದ ಮೂಲಕ ಜ್ಞಾನದ ಅರಿವನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉಣಬಡಿಸಿದರು.

ಕುವೆಂಪು ಅವರು ಶ್ರೇಷ್ಠ ಆಧ್ಯಾತ್ಮಿಕ ವ್ಯಕ್ತಿಯಾಗಿದ್ದರು. ಸಾಹಿತ್ಯ ಬರೆದ ಮಾತ್ರಕ್ಕೆ ಕುವೆಂಪು ಕವಿಯಲ್ಲ. ಅವರ ಸಾಧನೆ ಹಿಂದೆ ಇರುವುದು ಗುರು ಹಾಗೂ ಆಧ್ಯಾತ್ಮ. ಪ್ರಜ್ಞೆ ಅನಾವರಣಗೊಂಡ ವ್ಯಕ್ತಿ ಏನೇ ಮಾತನಾಡಿದರೂ ಅದು ಆಧ್ಯಾತ್ಮವಾಗಿರುತ್ತದೆಂದರು.

### ಕಲಿಕೆಯ ಹಸಿವಿದ್ದರೆ ಗುರು ಸಿಗುತ್ತಾರೆ

ಖ್ಯಾತ ವಾಗ್ಮಿ ಪ್ರೊ.ಕೃಷ್ಣೇಗೌಡ ಮಾತನಾಡಿ, ಎಲ್ಲದಕ್ಕೂ ನಾನೇ ಕಾರಣ ನನ್ನಿಂದಲೇ ಎಲ್ಲಾ ಎಂಬ ಭ್ರಮೆಯಿಂದ ಹೊರಬರದ ಹೊರತು ಗುರುವಿನ ಆಶೀರ್ವಾದ ಸಿಗಲು ಸಾಧ್ಯವಿಲ್ಲ. ನಾನು ಜೀವನಲ್ಲಿ ಏನನ್ನಾದರೂ ಕಲಿಯಬೇಕೆಂಬ ಹಸಿವಿದ್ದವರಿಗೆ ಒಳ್ಳೆಯ ಗುರು ಸಿಕ್ಕೇ ಸಿಗುತ್ತಾರೆ. ಪ್ರತಿಷ್ಟೆ, ಮನ್ನಣೆ, ಗೌರವ, ಆಸ್ತಿ-ಅಂತಸ್ತು ಇದೆಲ್ಲದರ ಅಹಂ ಅನ್ನು ಬಾಗಿಲಲ್ಲೇ ಬಿಟ್ಟು ಗುರುಗಳನ್ನು ಕಾಣಬೇಕೆಂದರು.

ಗುರು ಎನ್ನುವುದು ಒಂದು ತತ್ವ. ಯಾವುದೋ ಒಂದು ರೂಪ ಈ ಜಗತ್ತನ್ನೆಲ್ಲಾ ವ್ಯಾಪಿಸಿದೆ. ಗುರುವಿನ ಕಾರಣ್ಯ ಎನ್ನುವುದು ಎಲ್ಲದರಲ್ಲೂ ಅಣು ಅಣುವಿನಲ್ಲೂ ವ್ಯಾಪಿಸಿದೆ. ಅಶರೀರವಾಗಿ ವ್ಯಾಪಿಸಿರುವುದೇ ಗುರುವಿನ ಶಕ್ತಿ. ಗುರುತ್ವ ಎನ್ನುವುದಕ್ಕೆ ಶರೀರ ಇರುವುದಿಲ್ಲ ಎಂದು ಹೇಳಿದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಭಕ್ತರು ಗುರು ವಂದನೆ ಸಲ್ಲಿಸಿದರು. ಇದೇ ವೇಳೆ ಮೆಲುಕೋಟೆ ವೈ.ಎನ್.ಗೌಡ ಅವರು ಸಂಪಾದಿಸಿರುವ ಶ್ರೀ ಗುರೂಜಿ ಹೇಳಿದ ಕಥೆಗಳು ಎಂಬ ಕೃತಿ ಬಿಡುಗಡೆ ಮಾಡಲಾಯಿತು. ಬಿಜಿಎಸ್ ಶಾಲಾ ವಿದ್ಯಾರ್ಥಿಗಳು ಅರ್ಥಪೂರ್ಣವಾಗಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀ ಶಂಭುನಾಥ ಸ್ವಾಮೀಜಿ ಪ್ರಾಸ್ತವಿಕವಾಗಿ ಮಾತನಾಡಿದರು.

ವಿವಿಧ ಮಠಾಧೀಶರಾದ ಶ್ರೀ ರಾಮಚಂದ್ರ ಶಾಸ್ತ್ರಿ, ಶ್ರೀ ಸಂಗಮೇಶ್ವರ ಸ್ವಾಮೀಜಿ, ಶ್ರೀ ವಿಜಯಕುಮಾರಸ್ವಾಮೀಜಿ, ನಂದೀಶ್ವರ ಸ್ವಾಮೀಜಿ, ಶ್ರೀ ಕಲ್ಯಾಣ ಸ್ವಾಮೀಜಿ,



ಸಾಯಿಕೀರ್ತಿನಾಥ ಸ್ವಾಮೀಜಿ, ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಅರಸೀಕೆರೆ ಒಕ್ಕಲಿಗರ ಸಂಘದ ತಾಲ್ಲೂಕು ಅಧ್ಯಕ್ಷ ಅನಂತ್‌ಕುಮಾರ್, ಹೆಚ್.ಎಸ್.ವಿಜಯಕುಮಾರ್, ರಾಜೇಶ್ವರಿ, ಹುಣ್ಣಿಮೆ ಕಾರ್ಯಕ್ರಮ ಸಂಚಾಲಕ ಹೆಚ್ .ಬಿ.ಮದನಗೌಡ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ಶ್ರೀಮಠದ ವ್ಯವಸ್ಥಾಪಕ ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

# ರಂಗಭೂಮಿ ಪರಿಣಾಮಕಾರಿ ಕಲಿಕಾ ಮಾಧ್ಯಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಪಠ್ಯದ ವಸ್ತು ಮತ್ತು ಸಂದೇಶವನ್ನು ವಿದ್ಯಾರ್ಥಿಗಳಿಗೆ ಆಕರ್ಷಕವಾಗಿ ಮತ್ತು ಮನಮುಟ್ಟುವಂತೆ ತಲುಪಿಸಲು ರಂಗಭೂಮಿ ಪರಿಣಾಕಾರಿಯಾದ ಕಲಿಕಾ ಮಾಧ್ಯಮವಾಗಿದೆ ಎಂದು ಪತ್ರಕರ್ತ ಹೆತ್ತೂರು ನಾಗರಾಜ್ ಅಭಿಪ್ರಾಯಪಟ್ಟರು.

ನಗರದ ವಿಜಯನಗರ ಬಡಾವಣೆಯ ಟಾರ್ಗೆಟ್ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಅದಮ್ಯ ರಂಗಶಾಲೆ ಮೈಸೂರು, ಟಾರ್ಗೆಟ್ ಪದವಿ ಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆದ ಪಿಯುಸಿ ಪಠ್ಯಾಧಾರಿತ ರಂಗ ಪ್ರದರ್ಶನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸಿನಿಮಾ ಮತ್ತು ಟಿವಿ ಮಾಧ್ಯಮಕ್ಕೆ ನೀಡುವ ಆದ್ಯತೆಯನ್ನು ರಂಗಭೂಮಿಗೂ ನೀಡಬೇಕು. ಪಠ್ಯವನ್ನು ಆಧರಿಸಿದ ರಂಗಪ್ರದರ್ಶವನ್ನು ಆಸಕ್ತಿಯಿಂದ ವೀಕ್ಷಣೆ ಮಾಡಿ ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ನಾಟಕದ ಮೂಲಕ ಕಲಿತದ್ದು ಸ್ಥಿರವಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ರಂಗಭೂಮಿ ಮೂಲಕ ಉತ್ತಮ ಕಲಿಕೆಯನ್ನು ಸಾಧಿಸಬೇಕು ಎಂದರು.

ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಪ್ರಯೋಗಶೀಲ ಕಲಿಕಾ ಪ್ರಕ್ರಿಯೆ ತುಂಬಾ ಮುಖ್ಯ. ಪಠ್ಯದಲ್ಲಿನ ಕತೆಗಳನ್ನು ರಂಗ ಪ್ರಯೋಗಕ್ಕೆ ತಂದು ವಿದ್ಯಾರ್ಥಿಗಳಿಗೆ



ತಲುಪಿಸಿದದರೆ ಅಂತರ್ ಸಂವಹನ ಕಲಿಕೆ ಬಲವಾಗುತ್ತದೆ. ಹಾಗೆಯೇ, ಭೋಧನಾ ಸಮಯದಲ್ಲಿ ವಿದ್ಯಾರ್ಥಿಗಳು ಕುತೂಹಲಕಾರಿ ಪ್ರಶ್ನೆಗಳನ್ನು ಕೇಳುವುದರಿಂದ ಸಂಶೋಧನಾ ಪ್ರಯತ್ನಗಳು ನಡೆಯಲು ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಟಾರ್ಗೆಟ್ ಕಾಲೇಜಿನ ಪ್ರಾಂಶುಪಾಲ ಮಾತನಾಡಿ ಸಮಕಾಲೀನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣದಲ್ಲಿ ಕಾಲಹರಣ ಮಾಡಬಾರದು. ಅದನ್ನು ಕಲಿಕೆಗೆ ಪೂರಕವಾಗಿ ಬಳಸಿಕೊಂಡು ಉತ್ತಮ ಶಿಕ್ಷಣದ ಬದುಕನ್ನು ರೂಪಿಸಿಕೊಳ್ಳಬೇಕು ಎದರು ಕಿವಿಮಾತು ಹೇಳಿದರು.

ಪಠ್ಯ ಕೃತಿಯು ಓದಿ, ಅದರ ರಂಗರೂಪ ವೀಕ್ಷಣೆ ಮಾಡಿದರೆ ಕಲಿಕೆ ನೆನಪಿನಲ್ಲಿ ಉಳಿಯುತ್ತದೆ. ಜೊತೆಗೆ ನಾವು ಮಾನಸಿಕ ಬದಲಾವಣೆಗೆ ಒಳಗಾಗುತ್ತೇವೆ. ಸಮಾಜವನ್ನು ನೋಡುವ ದೃಷ್ಟಿಕೋನ ಬದಲಾಗುತ್ತದೆ. ಆ ಮೂಲಕ ಮೌಲ್ಯಗಳನ್ನೂ ಮೈಗೂಡಿಸಿಕೊಳ್ಳುತ್ತೇವೆ. ಇದಕ್ಕೆ ನಿದರ್ಶನವಾಗಿ ಸತ್ಯ ಹರಿಶ್ಚಂದ್ರ ಮತ್ತು ಶ್ರವಣಕುಮಾರ ನಾಟಕ ನೋಡಿ ಬದಲಾದ ಮಹಾತ್ಮ ಗಾಂಧಿಯವರ ಬದುಕು ನಮ್ಮ ಮುಂದಿದೆಟಿ ಈ ನಿಟ್ಟಿನಲ್ಲಿ ಮೈಸೂರಿನ ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಿದ್ದಾರೆ ಎಂದರು.

ಪತ್ರಕರ್ತ ಮಂಜು ಬನವಾಸೆ ಮಾತನಾಡಿ ಟಿಕಲೆಗಳಲ್ಲಿಯೇ ನಾಟಕ ಅತ್ಯಂತ ರಮಣೀಯವಾದುದು. ಸಂಭಾಷಣೆ - ಸಂವಾದ ಹೊಂದಿರುವ ದೃಶ್ಯ - ಶ್ರವ್ಯ ರೂಪದ ಪ್ರಬಲ ಮಾಧ್ಯಮವಾದ ಕಾರಣ ಮನಸ್ಸನ್ನು ಸೆರೆಹಿಡಿಯುತ್ತದೆ. ಮನೋಮಂದಿರದಲ್ಲಿ ರಂಗಮಂದಿರ ನಿರ್ಮಿಸಿತ್ತದೆ ಎಂದರು.

ವಿದ್ಯಾರ್ಥಿ ಜೀವನ ಬದುಕಿನ ಸುವರ್ಣ ಕಾಲ. ಈ ಕಾಲದಲ್ಲಿ ವಿದ್ಯಾರ್ಥಿಗಳು ಅಚಲತೆ, ದಕ್ಷತೆ, ಶ್ರದ್ಧೆಯಿಂದ ಧ್ಯಾನಾಸಕ್ತರಾಗಿ ಓದಿ ಸಾಂಸ್ಕೃತಿಕ ಸಿರಿವಂತಿಕೆಯನ್ನು ಗಟ್ಟಿಗೊಳಿಸಿಕೊಳ್ಳಬೇಕು. ಬದಲಾವಣೆಗೆ ತೆರೆದುಕೊಂಡು ಸ್ವಾಭಿಮಾನದ ಬದುಕನ್ನ ಕಟ್ಟಿಕೊಳ್ಳಬೇಕು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಮೈಸೂರಿನ ಅದಮ್ಯ ರಂಗಶಾಲೆ ಹಲವು ಸಾಧಕರಿಗೆ ಅದಮ್ಯ ಕನ್ನಡ ಚೇತನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಖ್ಯಾತ ಪತ್ರಕರ್ತರಾದ ವೇಣು ಕುಮಾರ್ ಕೆ.ಹೆಚ್. ಹಾಗೂ ಮಂಜು ಬನವಾಸೆ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ (ಪ್ರಧಾನ) ಕನ್ನಡ ಉಪನ್ಯಾಸಕ ವೆಂಕಟೇಶ್ ದೇವಿಪುರ ಸುಜಲ ಪಿಯು ಕಾಲೇಜಿನ ಕನ್ನಡ ಉಪನ್ಯಾಸಕ ಚಂದ್ರಶೇಖರ್ ಎನ್. ಕೆ. ಟಾರ್ಗೆಟ್ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಹಾನಗಲ್ ದೇವರಾಜ್ ಬ್ರಿಲಿಯಂಟ್ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಶಿವಪ್ರಸಾದ ಯು. ಜಿ. ಟೈಮ್ಸ್ ಗುರುಕುಲ ಪಿಯು ಕಾಲೇಜಿನ ಕನ್ನಡ ಉಪನ್ಯಾಸಕಿ ಸಿ. ಎಲ್. ಅಶ್ವಿನಿ ಹಾಗೂ ಹೆಚ್. ಕೆ.ಎಸ್. ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ರಮೇಶ್ ಎಂ. ಅದಮ್ಯ ಕನ್ನಡ ಚೇತನ ಪ್ರಶಸ್ತಿಗೆ ಭಾಜನರಾದರು.

ವೇದಿಕೆ ಕಾರ್ಯಕ್ರಮದ ಬಳಿಕ ಪಿಯುಸಿ ಪಠ್ಯಾಧಾರಿತ ರಂಗಪ್ರದರ್ಶನ ನಡೆಯಿತು.

## ಬೇಲೂರಿನಲ್ಲಿ ಎಸ್.ಜಾನಕಿ ನಿಧನಕ್ಕೆ ಶ್ರದ್ಧಾಂಜಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜನಪದ ಸಾಹಿತಿ ಮತಿಘಟ್ಟ ಕೃಷ್ಣಮೂರ್ತಿಯವರ ಜನ್ಮದಿನಾಚರಣೆ ಹಾಗೂ ಗಾನಕೋಗಿಲೆ ಎಸ್. ಜಾನಕಿ ಅವರ ನುಡಿನಮನ ಕಾರ್ಯಕ್ರಮವನ್ನು ಪಟ್ಟಣದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಮಾನ ಮಂಜೇಗೌಡ ಮಾತನಾಡಿ, ಹಳೇಬೀಡು ಹೋಬಳಿಯ ಮತ್ತಿಘಟ್ಟ ಗ್ರಾಮದವರಾದ ಮತಿಘಟ್ಟ ಕೃಷ್ಣಮೂರ್ತಿಯವರು ಹಳ್ಳಿಹಳ್ಳಿಗಳಿಗೆ ತೆರಳಿ ಜನಪದ ಗೀತೆಗಳನ್ನು ಸಂಗ್ರಹಿಸಿ ಗ್ರಂಥ ರೂಪದಲ್ಲಿ ಪ್ರಕಟಿಸುವ ಮೂಲಕ ಕನ್ನಡ ಜನಪದ ಸಾಹಿತ್ಯದ ಸಂರಕ್ಷಣೆಗೆ ಅಪಾರ ಕೊಡುಗೆ ನೀಡಿದ್ದಾರೆ. ತಮ್ಮ ಬದುಕನ್ನೇ ಜನಪದ ಪರಂಪರೆಯ ಉಳಿವಿಗೆ ಸಮರ್ಪಿಸಿಕೊಂಡ ಅವರ ಸೇವೆ ಸದಾ ಸ್ಮರಣೀಯವಾಗಿರಲಿದೆ ಎಂದು ಹೇಳಿದರು.

ಪುರಸಭೆ ಅಧ್ಯಕ್ಷ ಅಕ್ರಮ್ ಶರೀಫ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಪ್ರತಿ ತಿಂಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ. ಸಮಾಜಕ್ಕೆ ದಾರಿ ತೋರಿದ ಮಹನೀಯರನ್ನು ಸ್ಮರಿಸುವುದು ಯುವಪೀಳಿಗೆಗೆ ಪ್ರೇರಣೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಜಿ.ಕೆ. ವೀಣಾ, ಅಕ್ಷರ ದಾಸೋಹ ಸಹ ನಿರ್ದೇಶಕ ಧನಂಜಯ ಮಾತನಾಡಿದರು.

ಸಂಶೋಧಕ ಸಾಹಿತಿ ಡಾ. ಶ್ರೀವತ್ಸ ವಟಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಮಾ. ಶಿವಮೂರ್ತಿ, ಗೌರವ ಕಾರ್ಯದರ್ಶಿ ಎಸ್. ಮಹೇಶ್, ಕೋಶಾಧ್ಯಕ್ಷ ಗುರುರಾಜ್ ಇತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಆಗಸ್ಟ್-01

1834: ಬ್ರಿಟಿಷ್ ಸಾಮ್ರಾಜ್ಯದಲ್ಲಿ ಗುಲಾಮಗಿರಿಯನ್ನು ಅಧಿಕೃತವಾಗಿ ರದ್ದುಗೊಳಿಸುವ ಕಾನೂನು ಜಾರಿಗೆ ಬಂತು.

1914: ಜರ್ಮನಿಯು ರಷ್ಯಾ ವಿರುದ್ಧ ಯುದ್ಧ ಘೋಷಿಸುವ ಮೂಲಕ ಮೊದಲ ಮಹಾಯುದ್ಧದ ವಿಸ್ತರಣೆಗೆ ಕಾರಣವಾಯಿತು.

1944: ಪೋಲೆಂಡ್‌ನ ರಾಜಧಾನಿ ವಾರ್ಸಾದಲ್ಲಿ ನಾಜಿ ಆಳ್ವಿಕೆಯ ವಿರುದ್ಧ ವಾರ್ಸಾ ದಂಗೆ ಆರಂಭವಾಯಿತು.

1957: ಭಾರತದಲ್ಲಿ ರಾಷ್ಟ್ರೀಯ ಪುಸ್ತಕ ಟ್ರಸ್ಟ್ ಕಾರ್ಯಾರಂಭ ಮಾಡಿತು.

1995: ಭಾರತದಲ್ಲಿ ಮೊದಲ ಬಾರಿಗೆ ಮೊಬೈಲ್ ದೂರವಾಣಿ ಸೇವೆ ವಾಣಿಜ್ಯವಾಗಿ ಆರಂಭವಾಯಿತು.

**ಜನನ**

1779: ಫ್ರಾನ್ಸಿಸ್ ಸ್ಕಾಟ್ ಕೀ

1819: ಹರ್ಮನ್ ಮೆಲ್ವಿಲ್

1933: ಮೀನಾ ಕುಮಾರಿ

**ನಿಧನ**

1920: ಬಾಲ ಗಂಗಾಧರ ತಿಲಕ್, ಸ್ವಾತಂತ್ರ್ಯ ಹೋರಾಟಗಾರ

2010: ಕಲ್ಯಾಣ್ ಕುಮಾರ್

# ಲಲಿತಾ-4

**– ಧನಂಜಯ ಜೀವಾಳ ಬಿ.ಕೆ.**

ಮುಖ್ಯ ರಸ್ತೆಗೆ ಬಂದ ಕೇಪೀಯವರಿಗೆ ಯಾವುದೇ ರಿಕ್ಷಾಗಳು ಕಾಣಲಿಲ್ಲ. ಸಂಜೆಯ ಸುಮಾರಿಗೆ ಮಳೆ ಬರುವ ಸೂಚನೆಗಳು ಕಾಣುತಿತ್ತು. ನಡೆದುಕೊಂಡೇ ಹೋಗೋಣವೆಂದುಕೊಂಡು ನಿಧಾನವಾಗಿ ನಡೆಯತೊಡಗಿದರು. ತಾನು ಅಗತ್ಯಕ್ಕಿಂತ ಜಾಸ್ತಿ ಮಾತನಾಡಿದೆನಾ? ನನ್ನ ಮಾತಿನಿಂದ ಅವನ ಸ್ವಭಾವದಲ್ಲಿ ಏನಾದ್ರೂ ಸಕಾರಾತ್ಮಕ ಬದಲಾವಣೆಗಳಾಗಬಹುದಾ? ತನ್ನೆದುರಿಗೇ ಗಂಡನನ್ನು ಬೈದುದಕ್ಕೆ ಲಲಿತಳಿಗೆ ನೋವಾಯಿತೇನೋ? ಮುತ್ತಣ್ಣನ ಸಕಲ ಗುಣಗಳನ್ನು ತಿಳಿದಿದ್ದ ಆ ಲಲಿತಳ ಅಪ್ಪ ಅಂದಾನಿ ಅದ್ಯಾಕೆ ಆ ಮುತ್ತಣ್ಣನಿಗೆ ಮಗಳನ್ನ ಕಟ್ಟಿದ? ಮುತ್ತಣ್ಣನ ಅಪ್ಪನ ಅಗಾಧ ಸಂಪತ್ತಿನ ಅಮಿಷಕ್ಕೆ ಮಾರು ಹೋದನಾ? ತನಗೂ ತಿಳಿದಂತೆ ಲಲಿತಳ ಮದುವೆ ಆ ಚಿಕ್ಕಮಗಳೂರಿನ ಗಿರೀಶನೊಂದಿಗೆ ಆಗಬೇಕಿತ್ತಲ್ಲವೇ? ಹೀಗೆ ತಮ್ಮ ತಲೆಯನ್ನು ಕೆದಕಿದ ಜೇನುಗೂಡಿನಂತೆ ಮಾಡಿಕೊಂಡು ಅಂತು ಇಂತೂ ಮನೆ ತಲುಪಿದರು. ನಾಯಿಮರಿಯನ್ನು ಅಡ್ಡಾಡಿಸುತ್ತಾ ಕಾಂಪೌಂಡಿನೊಳಗೇ ಕಾಲಾಡುತಿದ್ದ ಕೇಪೀಯವರ ಮಡದಿ, ಪತಿಯು ದೂರದಲ್ಲಿ ಬರುತಿದ್ದುದನ್ನು ಕಂಡು ಗೇಟನ್ನು ತೆರೆದು ನಿಂತರು. ಒಳಬಂದ ಕೇಪೀ ಗೇಟನ್ನು ಮುಚ್ಚಿ, ಒಳಹೋಗಿ, ಕೈಕಾಲು ತೊಳೆದು, ಬಟ್ಟೆ ಬದಲಾಯಿಸಿ, ಒಂದು ದೊಡ್ಡ ಲೋಟದಲ್ಲಿ ನೀರು ಕುಡಿದು, ಎಂದಿನಂತೆ ತಮ್ಮ ಆರಾಮ ಕುರ್ಚಿಯಲ್ಲಿ ಕುಳಿತು ಮಡದಿ ಕಾಫಿ ತರುವುದನ್ನೇ ನಿರೀಕ್ಷಿಸುತಿದ್ದರು.

ನಿನ್ನೆ ಅದ್ಯಾರೋ ಕುಡ್ಡು ಬಿದ್ದೋನ್ನ ಮನೆಗೆ ಸೇರ್ಸಿ ಬಂದೆ ಅಂದ್ನಲ್ಲ, ಅದು ಕುದೋಳು ಅಂದಾನಿ ಅಳಿಯ ಮಾರಾಯ್ತಿ. ಅಂದಾನಿಯ ಎರಡ್ನೇ ಮಗಳು ಲಲಿತ ಇಲ್ವಾ, ಅವಳ ಗಂಡ. ಅದೇ ದೊಡ್ಮನೆ ನಂಜಯ್ಯನ ಮಗ ಮುತ್ತಣ್ಣ. ಎಂತಾ ಮನುಷ್ಯನ ಹೊಟ್ಟೇಲಿ ಎಂಥಾ ಮಗ, ಥೇ, ಆನೆ ಹೊಟ್ಟೇಲಿ ಲದ್ದಿ ಬಿದ್ದಂಗಾಯ್ತು ಎಂದರು ಕೇಪೀ.

ಅದೇ ನೀವು ಮತ್ತೆ ಆ ವೀರಭದ್ರಪ್ಪ ಇಬ್ರೂವೆ ಹೆಣ್ಕೇಳಕ್ಕೆ ಹೋಗಿದ್ರಲ, ಆ ಚಿಕ್ಮಗಳೂರ ಮೇಷ್ಟ್ರುಗೆ, ಯಂತಾ ಅವರ ಹೆಸ್ರು?

ಹೂ ಮತೆ, ಅದೇ ಲಲಿತ. ಪಾಪ ಆ ಗಿರೀಶಂಗೆ ಮದುವೆ ಮಾಡಿದ್ದಿದ್ರೆ, ಚೆನಾಗಿರೋದು. ಹೋಗ್ಲಿ ಬಿಡು, ಯಾರ್ಯಾರ ಬದುಕಲ್ಲಿ ಏನೇನಾಗ್ಬೇಕೋ ಅದು ಆಗ್ತಾ ಹೋಗುತ್ತೆ. ಈಗ ಹೀಗಾಗಿದೆ ಅಂತ ನಾವು ನಮಗೆ ತೋಚಿದಂತೆ ಮಾತಾಡ್ತೀವಿ. ಆಗ ಆ ಗಿರೀಶನ್ನ ಕಟ್ಕಂಡಿದ್ದಿದ್ರೆ ಇನ್ನೇನೋ ಆಗಿರ್ತಿತ್ತು.
ಈ ಬದುಕಿನಲಿ ಯಾವುದೂ ಪೂರ್ವ ನಿರ್ಧರಿತ ಅಲ್ಲ. ಸಫೋಕ್ಲಿಸ್ ಹೇಳಿಲ್ವಾ, ಆಕಸ್ಮಿಕಗಳ ಮೇಲೆ ಕಟ್ಟಿಟ್ಟಿದ್ದು ಈ ಬದುಕು ಅಂತ.

ಎತ್ತಿನಹೊಳೆಯಂಥಾ ಹಳ್ಳಿಲಿ ಬಾಡಿಗೆಗೆ ಅನುಕೂಲವಿರೋ ಮನೆ ಸಿಗೋಲ್ಲವೆಂದು ಕುದೋಳಿನ ಆ ಪೋಸ್ಟಾಫೀಸು ಬೀದೀಲೆ ಆ ಮನ್ಸ ಮನೆ ಮಾಡ್ಕಂಡಿದ್ದ. ದಿನಾ ಬೆಳಿಗ್ಗೆ ಬೇಗ ಎದ್ದು ನೀರ್ಹಿಡಿದು, ಅಡುಗೆ ಮಾಡಿಕೊಂಡು, ಮಧ್ಯಾಹ್ನಕ್ಕೆಂದು ಡಬ್ಬಕ್ಕೆ ಹಾಕ್ಕೊಂಡು ಸಂಜೆ ಆರುಗಂಟೆಗೆ ವಾಪಾಸ್ ಬರ್ತಿದ್ದವನಿಗೆ ಈ ಅಂದಾನಿ ಮಗಳು ಹೆಂಗೆ ಗಂಟುಬಿದ್ದಳೆಂದೇ ಗೊತ್ತಾಗಲಿಲ್ಲ.



**ಗ್ರಾಮಾಯಣ-36**

ಆಗಷ್ಟೇ ಪೀಯೂಸೀ ಮುಗಿಸಿ ಡಿಗ್ರಿಗೆ ಸೇರಲು ಓಡಾಡುತಿದ್ದ ಬಳ್ಳಿಯಂಥಾ ಬೆಳ್ಳಿ ಹುಡುಗಿಗೆ ಈ ಮಲ್ನಾಡಿನ ಕಪ್ರನೆಯ ಮೇಷ್ಟ್ರು ಅದೇನು ಮಂಕುಬೂದಿ ಎರಚಿದನೋ ಆ ದೇವರೇ ಬಲ್ಲ. ಹುಡುಗ ಮಾತ್ರ ಒಳ್ಳೇ ಪ್ರತಿಭಾವಂತ. ಆಟ ಆಡೋದು, ಬಾಷ್ಣ ಹೊಡಿಯೋದು, ಚಿತ್ರ ಬರೆಯೋದು, ಸಭೆ-ಸಮಾರಂಭ ಯೋಜಿಸಿ ನಡೆಸೋದು, ಸಂಘಟನೆ ಮಾಡೋದು, ಪತ್ರಿಕೆಗೆ ಬರೆಯೋದು ಅದಕ್ಕಿಂತ ಹೆಚ್ಚಾಗಿ ಆತನ ಮಾಡ್ತಿದ್ದ ಸಮುದಾಯದ ಕೆಲಸ. ನಮ್ಮೂರಿಂದ ಎತ್ತಿನಹೊಳೆವರೆಗೂ ಅವನ ಗೆಳೆಯರನ್ನೆಲ್ಲ ಸೇರಿಸಿ, ಅವನದೇ ಶಾಲಾ ಮಕ್ಕಳನ್ನ ಸೇರಿಸ್ಕೊಂಡು ರಸ್ತೆ ಎರಡೂ ಬದಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಗಿಡಗಳನ್ನ ನೆಡಿಸಿದ್ದು ಮಾತ್ರ ಆ ಕಾಲದಲ್ಲೇ ದೊಡ್ಡ ಸುದ್ದಿಯಾಗಿತ್ತು. ಇವತ್ತೂ ಆ ರಸ್ತೆ ಬದಿಯಲ್ಲಿ ಉಳಿದಿರೋ ಮುನ್ನೂರಕ್ಕೂ ಹೆಚ್ಚು ಮರಗಳು ಅವತ್ತಿನ ಅವರ ಗೆಳೆಯರ ಬಳಗದ ಕೆಲಸಕ್ಕೆ ಸಾಕ್ಷಿ.

ನನಗೊತ್ತಿತ್ತಲ ಈ ಲಲಿತಳ ಸ್ವಭಾವ, ಹೆಚ್ಚಿನಾಂಶ ಗಿರೀಶನ ಈ ಎಲ್ಲಾ ಆಸಕ್ತಿ, ಉತ್ಸಾಹಗಳೇ ಅವಳನ್ನ ಆತನೆಡೆಗೆ ಆಕರ್ಷಿತಳಾಗಲು ಪ್ರೇರಣೆ ಇರಬಹುದು. ದೈಹಿಕವಾಗಿ ಅಷ್ಟೇನೂ ಬಲಾಢ್ಯನೂ, ಆಕರ್ಷಕನೂ ಅಲ್ಲದ ಸಾಧಾರಣ ರೂಪಿನ ಈ ಕರಿ ಮೇಷ್ಟ್ರು ಇಡೀ ಊರಿಗೇ ಚೆಂದುಳ್ಳಿ ಚೆಲುವೆಯಂತಿದ್ದ ಲಲಿತಳ ಬದುಕನ್ನೇ ಬದಲಾಯಿಸುವಂತೆ ಆದದ್ದು ಅವತ್ತಿನ ಆಕಸ್ಮಿಕ ಸತ್ಯ. ಆದರೆ ಎಲ್ಲಾ ಒಳಿತುಗಳು ಅಗ್ನಿಪರೀಕ್ಷೆಯನ್ನು ಎದುರಿಸಲೇಬೇಕೆನ್ನುವಂತೆ ಆಗರ್ಭ ಶ್ರೀಮಂತರಾಗಿದ್ದ ಅಂದಾನಿ ಆ ಸುತ್ತಲಿನ ಊರುಗಳಲ್ಲೇ ಒಂದಷ್ಟು ಹವಾ ಇಟ್ಟುಕೊಂಡಿದ್ದ ಮನುಷ್ಯ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248